ಶ್ರೀ ಬಿ. ಬಸವಲಿಂಗಪ್ಪ :— ನಾವು ಅದನ್ನು ಲೆಕ್ಕ ಹಾಕಿಲ್ಲ.

ಶ್ರೀ ಬಿ. ಎಸ್. ಪಾಟೀಲ್ :— ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಆಯೋಗ ರಚಿಸಿ ವರದಿಯನ್ನು ಕೊಟ್ಟು ನಾಲ್ಕು ವರ್ಷಗಳಾಗಿರುತ್ತದೆ. ಇದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುವುದಾದರೆ ಇನ್ನು ಎಷ್ಟು ವರ್ಷಗಳಲ್ಲಿ ಮುಗಿಯಬಹುದೆಂಬುದನ್ನು ತಿಳಿಸುತ್ತೀರಾ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ :— ಈಗಾಗಲೇ ವಿರೋಧಪಕ್ಷದ ನಾಯಕರಿಗೆ ಉತ್ತರ ಕೊಡುತ್ತಾ ತಿಳಿಸಿದ್ದೇನೆ ಈ ಸೆಷನ್‌ನಲ್ಲಿಯೇ ತರುತ್ತೇವೆ ಮತ್ತು ಜರ್ಜಿಗೆ ಇಡುತ್ತೇವೆಂದು ಹೇಳಿರುತ್ತೇನೆ. ತಾವು ಏನು ನಿರ್ಣಯವನ್ನು ತೆಗೆದುಕೊಳ್ಳುತ್ತೀರೋ, ಆದರಂತೆ ಮಾಡುತ್ತೇನೆಂದು ಹೇಳುತ್ತೇನೆ.

1-30 p.m.

Directors of Milk Producing Co-operative Society, Hassan

764 SRI D. B. GANGADHARAPPA (Arasikere) — Will the Chief Minister be pleased to state :—

(*a*) the number of nominated Directors in Milk Producer's Co-operative Societies Union in Hassan ;

(*b*) the grounds on which the Director's got disqualified ;

(*c*) the names of the Directors and the date since when they have become disqualified from being continued as Directors ;

(*d*) whether it has come to the notice of the Government that Directors disqualified are still continued as Directors ?

SRI D. DEVARAJ URS (Chief Minister):—

(*a*) 18.

(*b*) He incurs disqualification :—

1 If he ceases to be a President of Milk Producer's Co-operative Society ; as per bye-law 23 (e) ;

2 If he absents himself from 3 executive meetings of the executive Committee as per by-law No. 24 ;

(*c*)

1 Sri M. Nandeesh, Chairman, Bage Milk Co-operative Society. 19-9-1978.

2 Sri M. S. Gopalaraj Urs, Chairman, Maggalur Milk Co-operative Society. 6-1-1978

3 Sri M. V. Rangaswamy, Chairman, Mosale Milk Co operative Society. 13-12-1978

4 Sri C. S. Puttaraj, Chairman, Aggunda Multi Co operative Society. 9-3-1978

5 Sri [illegible] a., Chairman, Alage Milk Co[illegible]ive Society. 1-7-1978

(*d*) Yes. the following directors :

1 Sri M V. Rangaswamy, Chairman, Mosale Milk Co-operative Society.

2 Sri C. S Basavaraj. Chairman, Aggunda Milk Co-operative Society.

3 Sri A. B. Nagendraiah, Chairman, Adagoor Milk Co-operative Society.

The same is under the consideration of the Government.

ಶ್ರೀ ಡಿ. ಬಿ. ಗಂಗಾಧರಪ್ಪ :—ಸ್ವಾಮಿ, ತಮ್ಮ ಉತ್ತರದಲ್ಲಿ ಹಾಸನ ಹಾಲು ಉತ್ಪಾದಕರ ಸಹಕಾರ ಸಂಘಗಳ ಯುನಿಯನ್ನಿನಲ್ಲಿ ೫ ಜನ ಅನರ್ಹತೆಯನ್ನು ಪಡೆದಿರುವ ಡೈರೆಕ್ಟರುಗಳಿದ್ದಾರೆ ಎಂದು ಹೇಳಿದ್ದೀರಿ. ಸರ್ಕಾರಕ್ಕೆ ಅಲ್ಲಿಂದ ವರದಿ ಯಾವಾಗ ಬಂತು ? ಇಷ್ಟು ದಿವಸ ಅವರನ್ನು ಡೈರೆಕ್ಟರನ್ನಾಗಿ ಮುಂದುವರಿಸಿರುವುದಕ್ಕೆ ಕಾರಣ ಏನು ?

ಶ್ರೀ ಡಿ. ದೇವರಾಜ್ ಅರಸ್ :— ಸರ್ಕಾರಕ್ಕೆ ೨೮ನೇ ತಾರೀಖು ಎರಡನೇ ತಿಂಗಳು ೧೯೭೯ರಲ್ಲಿ ವರದಿ ಬಂದಿದೆ, ಅದುವರೆಗೂ ನಮಗೆ ಗೊತ್ತಿರಲಿಲ್ಲ. ಕೆಲವರು ಮತ್ತೆ ಎಲೆಕ್ಟ್ ಆಗಿದ್ದಾರೆ ಇನ್ನು ಕೆಲವರು ಆಗಿಲ್ಲ. ಅದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಡಿ. ಬಿ. ಗಂಗಾಧರಪ್ಪ :— ನಮ್ಮ ತಾಲ್ಲೂಕಿನ ಅಗ್ಗುಂದ ಕ್ಷೀರ ಸಹಕಾರ ಸಂಘ ಕೆಲಸ ಮಾಡುತ್ತಿಲ್ಲ. ಆದರೂ ಒಂದು ವರ್ಷ ೧೦ ತಿಂಗಳಿಂದ ಅದರ ಅಧ್ಯಕ್ಷರನ್ನು ಡೈರೆಕ್ಟರನ್ನಾಗಿ ಮುಂದುವರಿಸುತ್ತಿದ್ದಾರೆ. ಇದು ಇಲಾಖೆಯವರಿಗೆ ಗೊತ್ತಿರಲಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :— ಈಗ ಯಾರು ಯಾರು ಅನರ್ಹತೆಯನ್ನು ಪಡೆದಿದ್ದಾರೋ ಅವರನ್ನೆಲ್ಲಾ ತೆಗೆದು ಬೇರೆಯವರನ್ನು ಹಾಕಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ.

ಶ್ರೀ ಡಿ. ಬಿ. ಗಂಗಾಧರಪ್ಪ:— ಸ್ವಾಮಿ ನನ್ನ 'ಈ' ಪ್ರಶ್ನೆಗೆ ಅಂದರೆ ಅನರ್ಹತೆಯನ್ನು ಪಡೆದಿರುವ ಡೈರೆಕ್ಟರುಗಳಾಗಿ ಮುಂದುವರೆಯುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ತಾವು ಸರ್ಕಾರದ ಗಮನಕ್ಕೆ ಬಂದಿರುತ್ತೇ ಮತ್ತು ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದೀರಿ. ಎಷ್ಟು ದಿವಸದಲ್ಲಿ ಅವರನ್ನು ಅನರ್ಹರನ್ನಾಗಿ ಮಾಡಿರುತ್ತೀರಿ ಸ್ವಾಮಿ.

ಶ್ರೀ ಡಿ. ದೇವರಾಜ ಅರಸ್ :— ಲೀಗಲ್ ಫಾರ್ಮಾಲಿಟೀಸ್ ಕೆಲವು ಇವೆ. ಅದೆಲ್ಲಾ ಮಾಡಿ ಆದಷ್ಟು ಶೀಘ್ರದಲ್ಲೇ ಮಾಡುತ್ತೇವೆ.

File movements in Secretariat

785 SRI T. B. JAYACHANDRA, (Kallambella)— Will the Chief Minister be pleased to state :—

(a) whether there is any specific direction to the officials in the Secretariat not to give details regarding file movements to Legislators ;

(*b*) whether the Legislators are barred from knowing file movement in the Secretariat;

(c) if so, what alternate arrangement Government have made to keep the Legislators informed about the progress matter in the Secretariat in which are supposed work as Legislators or public representative ?